**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆಃ 251/2024**

| | | |
|---|---|---|
| ಹೆಸರು | ಶ್ರೀ ಜಯಮ್ಮ | ಚಾಸಾಃ 01 |
| ಗಂಡನ ಹೆಸರು | ಶ್ರೀ ಮಾದನಾಯಕ | ಫ್ರಾಸಾಃ 01 |
| ವಯಸ್ಸು | 60 ವರ್ಷ | ಸಾಕ್ಷಿಯನ್ನು ದಿನಾಂಕಃ 10.09.2025 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | ಕೂಲಿ | |
| ವಾಸ | ಮಲ್ಲಹಳ್ಳಿ ಗ್ರಾಮ<br>ನಂಜನಗೂಡು ತಾಲ್ಲೂಕು | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ–**

ಚಾಸ–2 ನನ್ನ ಗಂಡ. ಚಾಸ–3 ರಿಂದ ಚಾಸ–6 ರವರು ನಮ್ಮ ಗ್ರಾಮದವರು. ಸುಮಾರು 2 ವರ್ಷಗಳ ಹಿಂದೆ ಆರೋಪಿಗಳು ನನ್ನ ಸೀರೆಯನ್ನು ಎಳೆದು ನನ್ನನ್ನು ಅವಾಚ್ಯ ಶಬ್ದಗಳಿಂದ ಬೈದರು. ನನ್ನ ಗಂಡ ಹಸು ಮೇಯಿಸುತ್ತಿದ್ದರು. ನನ್ನ ಗಂಡ ಸ್ಥಳಕ್ಕೆ ಬಂದರು. ನನ್ನ ಮಗನಿಗೆ ಕರೆ ಮಾಡಿದರು. ಚಾಸ–5 ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿದರು. ಆಸ್ಪತ್ರೆಗೆ ಪೊಲೀಸರು ಬಂದು ನನ್ನ ಹೇಳಿಕೆ ಪಡೆದರು. ಸಾಕ್ಷಿಯು ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ1 ಎಂದು, ಅದರಲ್ಲಿರುವ ಸಾಕ್ಷಿಯ ಹೆಬ್ಬೆಟ್ಟಿನ ಗುರುತನ್ನು ನಿಪಿ1(ಎ) ಎಂದು ಗುರುತಿಸಿರುತ್ತಾರೆ. ಸಾಕ್ಷಿಯು ಹೇಳಿಕೆಯಲ್ಲಿರುವ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಅಮಾನತ್ತು ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ2 ಎಂದು, ಅದರಲ್ಲಿರುವ ಹೆಬ್ಬೆಟ್ಟಿನ ಗುರುತನ್ನು ನಿಪಿ2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಅಮಾನತ್ತು ಮಹಜರ್ ನಲ್ಲಿರುವ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುತ್ತಾರೆ. ನಂತರ ನ್ಯಾಯಾಲಯಕ್ಕೆ ಬಂದು ಹೇಳಿಕೆ ನೀಡಿರುತ್ತೇನೆ. ಆರೋಪಿಗಳು ನನಗೆ ಕಲ್ಲಿನಲ್ಲಿ ಹಲ್ಲೆ ಮಾಡಿದರು. ಕಡ್ಡಿಯನ್ನು ಹಿಡಿದುಕೊಂಡಿದ್ದರು. 1 ಮತ್ತು 2ನೇ ಆರೋಪಿಗಳು ಮೂರನೇ ಆರೋಪಿಯ ಕುಮ್ಮಕ್ಕಿನ ಮೇರೆಗೆ ನನಗೆ ಹಲ್ಲೆ ಮಾಡಿದರು. ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ತನಗೆ ಹಲ್ಲೆ ಮಾಡಿದ ಕಲ್ಲನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಹಲ್ಲೆ ಮಾಡಿದ ದಿನದಂದು ದರಿಸಿದ್ದ ಸೀರೆಯನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ.2 ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ3 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರಮಾಣದಲ್ಲಿ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

ನಾನು ಶಿವಮಲ್ಲಪ್ಪ ಎಂಬುವವರ ಜಮೀನನ್ನು ಭೋಗ್ಯಕ್ಕೆ ಪಡೆದಿದ್ದೆ ಎಂದರೆ ಸರಿಯಲ್ಲ. ದಿಃ 15.12.2023 ಸುಮಾರು 12.00 ಗಂಟೆ ಸಮಯದಲ್ಲಿ ನಾನು ದನಗಳನ್ನು ಮೇಯಿಸುತ್ತಿದ್ದೆ ಎಂದರೆ ಸರಿ. ಆಗ 1 ಮತ್ತು 2ನೇ ಆರೋಪಿಗಳು ತಮ್ಮ ಜಮೀನಿನಲ್ಲಿ ನೀರು ಕಟ್ಟುತ್ತಿದ್ದರು ಎಂದರೆ ಸರಿ. ಮನೆಯ ಬಳಿ ಮಗುವನ್ನು ಶಾಲೆಗೆ ಕಳುಹಿಸುವ ವಿಷಯವಾಗಿ ನನ್ನ ಸೋಸೆಗೆ ಬೈಯುವ ನೆಪ ಒಡ್ಡಿ ನಮಗೆ

ಬೈಯುತ್ತಿದ್ದೀಯಾ ಎಂದು ಜಗಳ ತೆಗೆಯುತ್ತಿದ್ದೀಯಾ ಎಂದರು ಎಂದರೆ ಸರಿ. ಆರೋಪಿಗಳು ನನಗೆ ಬೋಳಿ ಮಗಳೆ, ಸೂಳೆ ಮಗಳೆ ಎಂದು ಅವಾಚ್ಯವಾಗಿ ಬೈದರು ಎಂದರೆ ಸರಿ. 1ನೇ ಆರೋಪಿ ಮು.ಮಾ.1 ರಿಂದ ಎರಡು ಮಂಡಿ ಮತ್ತು ಬೆನ್ನಿಗೆ ಹಲ್ಲೆ ಮಾಡಿದರು ಎಂದರೆ ಸರಿ. 2ನೇ ಆರೋಪಿ ಏಕಾಏಕೀ ಬಂದು ನನ್ನನ್ನು ತಳ್ಳಿ ಕೇಳಕ್ಕೆ ಬಿಳಿಸಿದನು ಎಂದರೆ ಸರಿ. ಆಗ 1ನೇ ಆರೋಪಿ ನನ್ನ ಸೀರೆಯನ್ನು ಅರಿದು ಹಾಕಿದ ಎಂದರೆ ಸರಿ. 3ನೇ ಆರೋಪಿಯ ಕುಮ್ಮಕ್ಕಿನ ಮೇರೆಗೆ ನನ್ನ ಮೇಲೆ ಜಗಳ ಮಾಡಿದರು ಎಂದರೆ ಸರಿ. ನಾನು ಕೆಳಕ್ಕೆ ಬಿದ್ದೆ ಆಗ ಚಾಸ-2 ರವರು ಬಂದು ಜಗಳ ಬಿಡಿಸಿದರು ಎಂದರೆ ಸರಿ. ನಂತರ ಚಾಸ-5 ರವರ ಸಹಾಯದಿಂದ ನಂಜನಗೂಡು ಸರ್ಕಾರಿ ಆಸ್ಪತ್ರೆಗೆ ಹೋದೇವು ಎಂದರೆ ಸರಿ. ಸದರಿ ಆಸ್ಪತ್ರೆಯಲ್ಲಿ ನಿಪಿ1 ರಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

ದಿಃ 20.12.2023 ರಂದು ನಾನು ಕವಲಂದೆ ಪೊಲೀಸ್ ಠಾಣೆಯಲ್ಲಿ ಮು.ಮಾ.2 ನ್ನು ತೆಗೆದುಕೊಂಡು ಹೋದ ಮೇರೆಗೆ ಅವರು ಅದನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿ. ಸದರಿ ಮಹಜರ್ ನ್ನು ನನ್ನ ಮತ್ತು ಚಾಸ-3 ಮತ್ತು 4 ರವರ ಸಮಕ್ಷಮ ಬೆಳಿಗ್ಗೆ 10.30 ರಿಂದ 11.00 ಗಂಟೆ ಸಮಯಕ್ಕೆ ಬರೆದರು ಎಂದರೆ ಸರಿ. ಮು.ಮಾ.2 ಸೀರೆಯನ್ನು ನಾನು ಠಾಣೆಗೆ ಹೋಗಿ ಹಾಜರುಪಡಿಸಿದೆ ಎಂದರೆ ಸರಿ. ನಿಪಿ2 ಮಹಜರ್ ನ ವಿಷಯ ತಿಳಿದು ನಾನು ಹೆಬ್ಬೆಟ್ಟಿನ ಗುರುತು ಹಾಕಿದೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ನಾನು ಶಿವಮಲ್ಲಪ್ಪರವರ ಜೊತೆ ಭೋಗ್ಯದ ಕರಾರು ಮಾಡಿಕೊಂಡಿದ್ದೇನೆ. ಭೋಗ್ಯ ಮಾಡಿಕೊಂಡಿರುವ ಜಮೀನಿನ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಗಲಾಟೆಯಾಗುವ ಮೊದಲು ನಾನು ಮತ್ತು ಆರೋಪಿಗಳು ಚೆನ್ನಾಗಿದ್ದೇವು ಎಂದರೆ ಸರಿ.

ಆರೋಪಿ 1 ಮತ್ತು 2 ನನ್ನನ್ನು ಮೊದಲು ದೊಡ್ಡಮ್ಮ ಎಂದು ಕರೆಯುತ್ತಿದ್ದರು ಎಂದರೆ ಸರಿ. 3ನೇ ಆರೋಪಿಯ ತಾಯಿ ನನ್ನನ್ನು ಅಕ್ಕ ಎಂದು ಕರೆಯುತ್ತಿದ್ದರು ಎಂದರೆ ಸರಿ. ಈಗ ನನ್ನ ಮತ್ತು ಆರೋಪಿಗಳ ನಡುವೆ ವೈಶಮ್ಯ ಮತ್ತು ದ್ವೇಷ ಇಲ್ಲ ಎಂದರೆ ಸರಿ. ಗಲಾಟೆಯಾದಾಗ ನಾನು ಒಬ್ಬಳೆ ಇದ್ದೆ. ನನ್ನ ಗಂಡ ದೂರದಲ್ಲಿ ಹಸು ಮೇಯಿಸುತ್ತಿದ್ದರು. ನಾನು ಕೂಗಿಕೊಂಡ ಮೇಲೆ ನನ್ನ ಗಂಡ ಅಲ್ಲಿಗೆ ಬಂದರು. ನನ್ನ ಗಂಡ ಜಗಳ ನೋಡಲಿಲ್ಲ. ಆರೋಪಿ 1 ಮತ್ತು ರವರ ತಾಯಿ ಜಗಳ ಆದ ದಿನ ಹಾಜರಿದ್ದ ಬಗ್ಗೆ ನೆನಪಿಲ್ಲ. ಮುಮಾ.1 ಸಾಮಾನ್ಯವಾಗಿ ಎಲ್ಲಾ ಕಡೆ ದೂರದಲ್ಲಿ ದೊರೆಯುತ್ತದೆ ಎಂದರೆ ಸರಿ. ತುಂಬ ಹತ್ತಿರದಿಂದ ಮು.ಮಾ.1 ರಿಂದ ಹಲ್ಲೆ ಮಾಡಿದರು. ಮು.ಮಾ.1 ರಿಂದ ಆರೋಪಿಗಳು ನನಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಎರಡು ಮಂಡಿಗಳಿಗೂ ಆರೋಪಿಗಳು ಹಲ್ಲೆ ಮಾಡಿದರು.

1ನೇ ಆರೋಪಿ ನನ್ನ ಸೀರೆಯನ್ನು ಹಿಡಿದು ಎಳೆದ. ನನಗೆ ಹಲ್ಲೆ ಮಾಡಿದ ಮತ್ತು ಸೀರೆ ಎಳೆದಿದ್ದನ್ನು ಯಾರು ನೋಡಲಿಲ್ಲ. ಸದರಿ ಕೃತ್ಯದ ಸಲುವಾಗಿ ನಮ್ಮ ಗ್ರಾಮದಲ್ಲಿ ಪಂಚಾಯಿತಿ ಮಾಡಲಿಲ್ಲ. ನನ್ನ ಗಂಡ ಮತ್ತು ಮಗ ಆರೋಪಿಗಳನ್ನು ಏಕೆ ನನಗೆ ಹಲ್ಲೆ ಮಾಡಿದ್ದೀರಾ ಎಂದು ಕೇಳಲಿಲ್ಲ. ಘಟನೆಯ ವಿಷಯವನ್ನು ಗ್ರಾಮದ ಯಜಮಾನರಿಗೆ ತಿಳಿಸಿಲ್ಲ. ನನ್ನ ಮಗ ದ್ವಿ-ಚಕ್ರ ವಾಹನದಲ್ಲಿ ನನ್ನನ್ನು ಮನೆಯ ತನಕ ಕರೆದುಕೊಂಡು ಬಂದನು. ನಾನು ಆಸ್ಪತ್ರೆಯಲ್ಲಿ ಮೂರು ದಿನ ಒಳ ರೋಗಿಯಾಗಿ ದಾಖಲಾಗಿದ್ದೆ. ಸರ್ಕಾರಿ ಆಸ್ಪತ್ರೆಯಲ್ಲಿ ದಾಖಾಲಾಗಿದ್ದೆ. ವಾರ್ಡ್ ನ ಸಂಖ್ಯೆ ನನಗೆ ಗೊತ್ತಿಲ್ಲ. ಆರೋಪಿಗಳು ನನಗೆ ಹಲ್ಲೆ ಮಾಡಿಲ್ಲ ಮತ್ತು ನನ್ನ ಸೀರೆಯನ್ನು ಹಿಡಿದು ಎಳೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ತಮ್ಮ ಜಮೀನಿನಲ್ಲಿ ನೀರನ್ನು ಆಯಿಸುತ್ತಿದ್ದರು ಮತ್ತು ನನ್ನ ಮೇಲೆ ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ.

ಪೊಲೀಸರು ನನ್ನ ಹೇಳಿಕೆ ಪಡೆದರು. ಮಹಜರ್ ನಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ಪೊಲೀಸರು ನನಗೆ ಮಹಜರ್ ನ್ನು ಓದಿ ಹೇಳಿಲ್ಲ. ಪೊಲೀಸರಿಗೆ ನಾನು ಏನೂ ನೀಡಿದೆ ಎಂದು ನನಗೆ ನೆನಪಿಲ್ಲ. ಸದರಿ ಮಹಜರ್ ಗೆ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ3 ನ್ನು ನ್ಯಾಯಾಲಯದ ಮುಂದೆ ಸೃಷ್ಟಿಸಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಈಗ ನಾನು ಮತ್ತು ಆರೋಪಿಗಳು ಚೆನ್ನಾಗಿ ಮಾತನಾಡುತ್ತೇವೆ ಎಂದರೆ ಸರಿಯಲ್ಲ. ನನ್ನ ಗಂಡ ನನ್ನ ಮಗನಿಗೆ ಕರೆ ಮಾಡಿದರು. ನನ್ನ ಮಗನ ಮೊಬೈಲ್ ಸಂಖ್ಯೆ ನನಗೆ ಗೊತ್ತಿಲ್ಲ. ಕೇವಲ ದೂರು ನೀಡುವ ಉದ್ದೇಶದಿಂದ ನಾನು ಆಸ್ಪತ್ರೆಗೆ ದಾಖಲಾದೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ನನ್ನ ಮೇಲೆ ದ್ವೇಷ ಇಲ್ಲ ಎಂದರೆ ಸರಿಯಲ್ಲ. ಆರೋಪಿಗಳಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. 3ನೇ ಆರೋಪಿ ವ್ಯಾಪಾರಕ್ಕೆ ಹೋದರೆ ಬೆಳಿಗ್ಗೆ ಹೋಗಿ ಸಂಜೆ ಬರುತ್ತಾರೆ ಎಂದರೆ ಸರಿಯಲ್ಲ. 3ನೇ ಆರೋಪಿ ಜಗಳಕ್ಕೆ ಕುಮ್ಮಕ್ಕು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸುಳ್ಳು ದೂರು ನೀಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**